34

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಭರತ್ ಕುಮಾರ್ ಕೆ., ಪ್ರಥಮ ದರ್ಜೆ ಸಹಾಯಕರು ಇವರ ಸೇವೆಯನ್ನು ಲೋಕೋಪಯೋಗಿ ಇಲಾಖೆಯಿಂದ ಜಲಸಂಪನ್ಮೂಲ ಇಲಾಖೆಗೆ ಶಾಶ್ವತವಾಗಿ ವರ್ಗಾಯಿಸಿರುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಜಸಂಇ 06 ಸೇಎಸು 2015, ದಿನಾಂಕ: 25.11.2019.
2. ಸರ್ಕಾರದ ಆದೇಶ ಸಂಖ್ಯೆ: ಜಸಂಇ 06 ಸೇಎಸು 2015(ಭಾಗ-5), ದಿನಾಂಕ: 30.01.2021.
3. ಸರ್ಕಾರದ ಆದೇಶ ಸಂಖ್ಯೆ: ಜಸಂಇ 06 ಸೇಎಸು 2015(ಭಾಗ-6), ದಿನಾಂಕ: 02.03.2021.
4. ಸರ್ಕಾರದ ಆದೇಶ ಸಂಖ್ಯೆ: ಜಸಂಇ 06 ಸೇಎಸು 2015(ಭಾಗ-7), ದಿನಾಂಕ: 16.03.2021.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ), ಬೆಂಗಳೂರು ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿಬಿಎಸ್/1/ಪ್ರ.ದ.ಸ/ಇ.ಬೇ/ಬಿಡುಗಡೆ/ಇಎಸ್‌ಹೆಚ್/2021-22, ದಿನಾಂಕ: 18.08.2021.
6. ನೌಕರರ ಮನವಿ ದಿನಾಂಕ: 03.09.2021.

*** *** ***

**ಪ್ರಸ್ತಾವನೆ:**

(1) ಮೇಲೆ (1)ರಲ್ಲಿ ಓದಲಾದ, ಆದೇಶದಲ್ಲಿ ದಿನಾಂಕ: 20.06.2018 ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಜಲಸಂಪನ್ಮೂಲ ಇಲಾಖೆಯ ಅಧಿಕಾರಿ/ನೌಕರರನ್ನು ಲೋಕೋಪಯೋಗಿ ಇಲಾಖೆಯಿಂದ ಬೇರ್ಪಡಿಸುವ ಬಗ್ಗೆ ತೆಗೆದುಕೊಂಡ ತೀರ್ಮಾನದಂತೆ ಜಲಸಂಪನ್ಮೂಲ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ವೃಂದಗಳ ಲೋಕೋಪಯೋಗಿ ಇಲಾಖೆ ಹಾಗೂ ಇತರ ಇಲಾಖೆಗಳ ಅಧಿಕಾರಿ/ನೌಕರರುಗಳಲ್ಲಿ 2003ನೇ ವರ್ಷಕ್ಕಿಂತ ಮೊದಲು ನೇಮಕಾತಿಹೊಂದಿರುವಂತಹ ಅಧಿಕಾರಿ/ನೌಕರರುಗಳು ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವಿಲೀನಗೊಳ್ಳಲು ಇಚ್ಛಿಸುವವರಿಗೆ ಆನ್ ಲೈನ್ ನಲ್ಲಿ ಅಭಿಮತ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು.

(2) ಮೇಲೆ ಓದಲಾದ (2),(3) ಹಾಗೂ (4) ರ ಆದೇಶಗಳಲ್ಲಿ ನೀಡಿರುವ ಅಭಿಮತ ಸಲ್ಲಿಸುವ ಅವಕಾಶವನ್ನು ಬಳಸಿಕೊಂಡು ಜಲಸಂಪನ್ಮೂಲ ಇಲಾಖೆಯಲ್ಲಿ ವಿಲೀನಗೊಳ್ಳಲು ಅಭಿಮತ ಸಲ್ಲಿಸಿದ ಅರ್ಹ ಅಧಿಕಾರಿ/ನೌಕರರುಗಳ ಸೇವೆಯನ್ನು ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳು 1977ರ ನಿಯಮ 16(ಎ)(ii) ರನ್ವಯ ಜಲಸಂಪನ್ಮೂಲ ಇಲಾಖೆಗೆ ಶಾಶ್ವತವಾಗಿ ವರ್ಗಾಯಿಸಿ ಲೋಕೋಪಯೋಗಿ ಇಲಾಖೆಯಿಂದ ವಿವಿಧ ದಿನಾಂಕಗಳಂದು ಹೊರಡಿಸಿದ ಅಧಿಸೂಚನೆಗಳನ್ವಯ ಅಂತಹ ಅಧಿಕಾರಿ/ನೌಕರರುಗಳನ್ನು ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ಶಾಶ್ವತವಾಗಿ ವಿಲೀನಗೊಳಿಸಲಾಗಿರುತ್ತದೆ. ಅದರಂತೆ ಜಲಸಂಪನ್ಮೂಲ ಇಲಾಖೆಯ ಅಧಿಕಾರಿ/ನೌಕರರ ಸೇವೆಯನ್ನು ಲೋಕೋಪಯೋಗಿ ಇಲಾಖೆಯಿಂದ ಬೇರ್ಪಡಿಸುವುದಕ್ಕೆ ಸಂಬಂಧಿಸಿದಂತೆ ಈಗಾಗಲೇ ಅಂತಿಮ ಆದೇಶವಾಗಿರುತ್ತದೆ.

(3) ಮೇಲೆ (5) ರಲ್ಲಿ ಓದಲಾದ ದಿನಾಂಕ: 18.08.2021ರ ಅಧಿಕೃತ ಜ್ಞಾಪನ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಕಟ್ಟಡ ಮತ್ತು ಸಂಪರ್ಕ,(ದ), ಬೆಂಗಳೂರು ಇವರು ಲೋಕೋಪಯೋಗಿ ಇಲಾಖೆಯ ನೌಕರರಾದ ಶ್ರೀ ಭರತ್ ಕುಮಾರ್ ಕೆ., ಪ್ರಥಮ ದರ್ಜೆ ಸಹಾಯಕರು ಇವರನ್ನು ಇಲಾಖಾ ಬೇರ್ಪಡೆಗೆ ಸಂಬಂಧಿಸಿದಂತೆ ಸದರಿಯವರು ಸಲ್ಲಿಸಿರುವ ಇಚ್ಛಾಪತ್ರದ ಅನುಸಾರ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳು 1977ರ ನಿಯಮ 16(ಎ)(ii) ರನ್ವಯ ಜಲಸಂಪನ್ಮೂಲ ಇಲಾಖೆಗೆ ಶಾಶ್ವತವಾಗಿ ವರ್ಗಾಯಿಸಿರುತ್ತಾರೆ.

(4) ಮೇಲೆ (6) ರಲ್ಲಿ ಓದಲಾದ ದಿನಾಂಕ: 03.09.2021 ರ ಮನವಿಯಲ್ಲಿ ಶ್ರೀ ಭರತ್ ಕುಮಾರ್ ಕೆ., ಪ್ರಥಮ ದರ್ಜೆ ಸಹಾಯಕರು ಇವರು ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ) ಇವರ ಆದೇಶದಂತೆ ತಮ್ಮನ್ನು ಲೋಕೋಪಯೋಗಿ ಇಲಾಖೆಯ ಸೇವೆಯಿಂದ ಬಿಡುಗಡೆಗೊಳಿಸಿದ್ದು, ತಮ್ಮನ್ನು ಜಲಸಂಪನ್ಮೂಲ ಇಲಾಖೆಯ ಸೇವೆಗೆ ವಿಲೀನಗೊಳಿಸಿ ಸ್ಥಳನಿಯುಕ್ತಿಗೊಳಿಸಬೇಕೆಂದು ಪ್ರಧಾನ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಕಛೇರಿಯಲ್ಲಿ ವರದಿ ಮಾಡಿಕೊಂಡಿರುವುದಾಗಿ ತಿಳಿಸುತ್ತಾ ಮುಂದಿನ ಸ್ಥಳನಿಯುಕ್ತಿಗೊಳಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

(5) ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿದೆ. ಶ್ರೀ ಭರತ್ ಕುಮಾರ್ ಕೆ., ಪ್ರಥಮ ದರ್ಜೆ ಸಹಾಯಕರು, ಇವರು ದಿನಾಂಕ: 23.03.2020 ರಂದು ಲೋಕೋಪಯೋಗಿ ಇಲಾಖೆಯಲ್ಲಿಯೇ ನೇಮಕಗೊಂಡಿರುತ್ತಾರೆ. ಅಂದರೆ, ಇವರು ಲೋಕೋಪಯೋಗಿ ಇಲಾಖೆಯ ನೌಕರರಾಗಿರುತ್ತಾರೆ. ದಿನಾಂಕ:31.12.2003 ರ ನಂತರ ಜಲಸಂಪನ್ಮೂಲ ಇಲಾಖೆಯ ಖಾಲಿ ಹುದ್ದೆಗಳಿಗೆ ಎದುರಾಗಿ ಲೋಕೋಪಯೋಗಿ ಇಲಾಖೆಯು ಯಾವುದೇ ನೇಮಕಾತಿ ಮಾಡಿರುವುದಿಲ್ಲ. ಆದ್ದರಿಂದ ದಿನಾಂಕ:31.12.2003 ರ ನಂತರ ನೇಮಕಗೊಂಡ ಅಧಿಕಾರಿ ನೌಕರರಿಗೆ ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ಶಾಶ್ವತವಾಗಿ ವರ್ಗಾವಣೆ ಮೂಲಕ ವಿಲೀನಹೊಂದಲು ಅವಕಾಶ ಕಲ್ಪಿಸಲಾಗಿತ್ತು. ಆದರೆ, ಇವರಿಗೆ ಇಲಾಖಾ ಬೇರ್ಪಡಿಕೆ ಪ್ರಕ್ರಿಯೆಯಲ್ಲಿ ಅಭಿಮತ ಸಲ್ಲಿಸಲು ಹಾಗೂ ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವರ್ಗಾವಣೆ ಮುಖಾಂತರ ವಿಲೀನ ಹೊಂದಲು ಅವಕಾಶವಿರಲಿಲ್ಲ.

(6) ಮುಂದುವರೆದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 171 ಸೇನೆನಿ 2020, ದಿನಾಂಕ: 06.07.2021 ರಲ್ಲಿ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 16(ಎ)(ii) ಗೆ ತಿದ್ದುಪಡಿ ತಂದು "ವರ್ಗಾವಣೆ ಮೂಲಕ" ಮಾಡುವ ನೇಮಕಾತಿಯನ್ನು ತೆಗೆದುಹಾಕಲಾಗಿದೆ. ಅಂದರೆ ದಿನಾಂಕ:06.07.2021 ರ ನಂತರ ಯಾವುದೇ ಒಬ್ಬ ಸಿವಿಲ್ ಸೇವಾ ನೌಕರರನ್ನು ಒಂದು ಇಲಾಖೆಯ ಸೇವೆಯಿಂದ ಮತ್ತೊಂದು ಇಲಾಖೆಯ ಸೇವೆಗೆ ವರ್ಗಾವಣೆ ಮೂಲಕ ವಿಲೀನಗೊಳ್ಳಲು ಅವಕಾಶ ವಿರುವುದಿಲ್ಲ. ಈ ನಿಯಮಗಳಿಗೆ ವ್ಯತಿರಿಕ್ತವಾಗಿ, ನಿಯಮಬಾಹಿರವಾಗಿ ಹಾಗೂ ಕಾನೂನಿನಲ್ಲಿ ಅವಕಾಶವಿಲ್ಲದೇ ಇದ್ದಾಗ್ಯೂ ಸಹ ಲೋಕೋಪಯೋಗಿ ಇಲಾಖೆಯು ಶ್ರೀ ಭರತ್ ಕುಮಾರ್ ಕೆ., ಪ್ರ.ದಾ.ಸ ಇವರನ್ನು ಜಲಸಂಪನ್ಮೂಲ ಇಲಾಖೆಗೆ ಶಾಶ್ವತ ವರ್ಗಾವಣೆ ಮಾಡಿರುವುದು ಹಾಗೂ ಈ ಪ್ರಕ್ರಿಯೆಯಲ್ಲಿ ಜಲಸಂಪನ್ಮೂಲ ಇಲಾಖೆಯ ಸಹಮತಿಯನ್ನು ಪಡೆಯದೇ ನೌಕರರನ್ನು ಲೋಕೋಪಯೋಗಿ ಇಲಾಖೆಯ ಸೇವೆಯಿಂದ ಬಿಡುಗಡೆ ಮಾಡಿರುವುದು ನಿಯಮ ಬಾಹಿರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀ ಭರತ್ ಕುಮಾರ್ ಕೆ., ಪ್ರಥಮ ದರ್ಜೆ ಸಹಾಯಕರು, ಇವರ ಸೇವೆಯನ್ನು ಲೋಕೋಪಯೋಗಿ ಇಲಾಖೆಗೆ ಹಿಂತಿರುಗಿಸಲು ಸರ್ಕಾರವು ತೀರ್ಮಾನಿಸಿದೆ ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 315 ಎಸ್‌ಎಎಸ್ 2021 (ಇ), ಬೆಂಗಳೂರು, ದಿನಾಂಕ:22.10.2021**

(7) ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಭರತ್ ಕುಮಾರ್ ಕೆ., ಪ್ರಥಮ ದರ್ಜೆ ಸಹಾಯಕರು, ಇವರನ್ನು ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವರ್ಗಾವಣೆ ಮೂಲಕ ವಿಲೀನಗೊಳಿಸಲು ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ(ದ) ಇವರು ಹೊರಡಿಸಿರುವ ಅಧಿಕೃತ ಜ್ಞಾಪನ ಸಂಖ್ಯೆ: ಸಿಬಿಎಸ್ /1/ಪ್ರ.ದ.ಸ/ಇ.ಬೇ/ಬಿಡುಗಡೆ/ಇಎಸ್‌ಹೆಚ್/2021-22, ದಿನಾಂಕ: 18.08.2021. ಆದೇಶವನ್ನು ತಿರಸ್ಕರಿಸಿ ಶ್ರೀ ಭರತ್ ಕುಮಾರ್ ಕೆ., ಇವರ ಸೇವೆಯನ್ನು ಲೋಕೋಪಯೋಗಿ ಇಲಾಖೆಗೆ ಹಿಂದಿರುಗಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Manjunatha H M 22/10

**(ಹೆಚ್. ಎಂ ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸೇವೆಗಳು-ಎ).

22/10

**ಇವರಿಗೆ**:

1. ಪ್ರಧಾನ ಮಹಾಲೇಖಪಾಲರು(ಜಿ&ಎಸ್.ಎಸ್.ಎ)/(ಈ&ಆರ್.ಎಸ್.ಎ)/(ಎ&ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸ ಸೌಧ.
3. ಪ್ರಧಾನ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು-560009.
4. ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡ(ದ) , ಲೋಕೋಪಯೋಗಿ ಕಟ್ಟಡಗಳ ಸಂಕೀರ್ಣ, ಕೆ.ಆರ್ ವೃತ್ತ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
6. ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆಯ ಇವರ ಆಪ್ತ ಕಾರ್ಯದರ್ಶಿ.
7. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆಯ ಇವರ ಆಪ್ತ ಕಾರ್ಯದರ್ಶಿ.
8. ಸರ್ಕಾರದ ಜಂಟಿ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ ಇವರ ಆಪ್ತ ಸಹಾಯಕರು, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು-ಬಿ)
10. ಶ್ರೀ ಭರತ್ ಕುಮಾರ್ ಕೆ., ಪ್ರಥಮ ದರ್ಜೆ ಸಹಾಯಕರು ಇವರಿಗೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ) ಇವರ ಮುಖಾಂತರ.
11. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.